Contemplated Irrigation Post of 865 Ha. is created under the project.

ಇ) ಚಿಕ್ಲಿ ಹೊಳೆ ಜಲಾಶಯ ಯೋಜನೆಯ ಅಣೆಕಟ್ಟಿನ ಪುನರ್ ಪರಿಷ್ಕೃತ ಅಂದಾಜಿನ ಮೊತ್ತ ರೂ. 440 ಲಕ್ಷಗಳು

The cost of Anicut as per rev estimate of Chicklihole Reserve Project is Rs. 440 lakhs.

ಈ) ಚಿಕ್ಲಿ ಹೊಳೆ ಜಲಾಶಯ ಯೋಜನೆಯಡಿ ಅಣೆಕಟ್ಟು ಕೆಲಸವು 1981 ರಲ್ಲಿ ಪ್ರಾರಂಭವಾಗಿ 1985 ರಲ್ಲಿ ಮುಕ್ತಾಯಗೊಂಡಿರುತ್ತದೆ.

The dam and appurtenant works Chicklihole Anicut started and completed on 1985.

ಹೇಮಾವತಿ ನಾಲಾ ಕಾಮಗಾರಿ ಟೆಂಡರ್ ಕುರಿತು

314 (596) ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಬೃಹತ್ ನೀರಾವರಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹೇಮಾವತಿ ನಾಲ ವಲಯದಲ್ಲಿ ಟೆಂಡರ್ ಕರೆಯದೆ ಕಾಮಗಾರಿಗಳ ಗುತ್ತಿಗೆಯನ್ನು ಕೊಡಲಾಗುತ್ತಿದೆಯೇ;

ಆ) ಕರ್ನಾಟಕ ನಿರ್ಮಾಣ ನಿಗಮಕ್ಕೆ ವಹಿಸಲಾದ ಕಾಮಗಾರಿಗಳು ಎಷ್ಟು; ಈ ನಿಗಮಕ್ಕೆ ನೀಡಲು ಕಾರಣವೇನು; ಸದರಿ ನಿಗಮದಲ್ಲಿ ಅವರೆ ಈ ಕಾಮಗಾರಿಗಳನ್ನು ಮಾಡಲು ಇರುವ ಅನಾನುಕೂಲವೇನು;

ಇ) ನಿಗಮದವರು ಗುತ್ತಿಗೆದಾರರಿಗೆ ಕೆಲಸ ವಹಿಸಿದ ಕಾಲದಲ್ಲಿ ಅನುಸರಿಸುತ್ತಿರುವ ನೀತಿಗಳೇನು;

ಈ) ಏಕ ಪಕ್ಷೀಯವಾಗಿ ಗುತ್ತಿಗೆ ಕೆಲಸ ನೀಡುವ ಪದ್ಧತಿಯನ್ನು ಅನುಸರಿಸಲಾಗುತ್ತಿದೆಯೇ;

ಉ) ಹಾಗಿದ್ದಲ್ಲಿ ಈ ರೀತಿ ಹಂಚಿಕೆಯನ್ನು ತಡೆಯಲಾಗುವುದೇ?

ಶ್ರೀ ಕೆ. ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) :

ಅ) ಹೇಮಾವತಿ ನಾಲಾ ವಲಯದಲ್ಲಿ ಕಾಮಗಾರಿಗಳನ್ನು ಟೆಂಡರ್ ಹಾಗೂ ಕೆ.ಎಸ್. ಸಿ. ಸಿ. ಮುಖಾಂತರ ಕೈಗೊಳ್ಳಲಾಗುತ್ತಿದೆ.

Works have been taken up through on tender and through K.S.C.C. in Hemavathy Canal Zone.

ಆ) 45 ಕಾಮಗಾರಿಗಳನ್ನು ಕೆ. ಎಸ್. ಸಿ. ಗೆ ವಹಿಸಲಾಗಿದೆ.

45 Nos of Works have been entrusted to K.S.C.C.

ಸರ್ಕಾರದ ಅಂಗ ಸಂಸ್ಥೆಯಾದ ಕೆ.ಎಸ್.ಸಿ.ಸಿ.ಗೆ ಹೆಚ್ಚಿನ ಕಾಮಗಾರಿಗಳನ್ನು ವಹಿಸಿ ಕೊಡುವ ಉದ್ದೇಶದಿಂದ ಆಯವ್ಯಯದಲ್ಲಿನ ಶೇ. 20 ರಷ್ಟು ಕಾಮಗಾರಿಗಳನ್ನು ನಿಗಮಕ್ಕೆ ವಹಿಸಿಕೊಡಬೇಕೆನ್ನುವ ಸರ್ಕಾರದ ಆದೇಶದಂತೆ ಕಾಮಗಾರಿಗಳನ್ನು ವಹಿಸಲಾಗಿದೆ.

As per the Govt. Order 20 % of the budgetted works are to be entrusted to M/s K.S.C.C. which is a Govt. under taking and accordingly more works are being entrusted to K.S.C.C

ಮಣ್ಣು ಅಗೆತ ಹಾಗೂ ಮಣ್ಣೇರಿ ಕಾಮಗಾರಿಗಳನ್ನು ಭಾರಿ ಯಂತ್ರೋಪಕರಣಗಳನ್ನು ಬಾಡಿಗೆಗೆ ಪಡೆದು ಹಾಗೂ ಅಡ್ಡ ಮೋರಿ ಕಾಮಗಾರಿಗಳನ್ನು ಸಾಮಾಗ್ರಿಗಳಾದ ಜಲ್ಲಿ, ಮರಳು ಕಲ್ಲುಗಳನ್ನು ಸರಬರಾಜುದಾರರಿಂದ ಅಂಗೀಕೃತ ದರಗಳಲ್ಲಿ ಪಡಿದು ಕೆಲಸಗಳನ್ನು ನಿಗಮವೇ ನಿರ್ವಹಿಸುತ್ತಿರುತ್ತದೆ

Corporation is executing the works by hiring machinries for earth work excavation and embarkment works and procuring materials such as sand, stone, metal from the suppliers at the approved rates.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

Does not arise inview of the above reply.

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

Does not arise inview of the above reply.

ಹೇಮಾವತಿ ನಾಲೆಯ ತಿಪಟೂರು ತಾಲ್ಲೂಕು ಅರಳಗುಪ್ಪೆಯ ಬಳಿ ಕಟ್ಟಿರುವ ಸೇತುವೆ ಕುರಿತು

315 (599) ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಬೃಹತ್ ನೀರಾವರಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

ಅ) ಹೇಮಾವತಿ ನಾಲೆಯ ತಿಪಟೂರು ತಾಲ್ಲೂಕು ಅರಳಗುಪ್ಪೆಯ ಬಳಿ ಕಟ್ಟಿರುವ ಸೇತುವೆ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ಕಾಮಗಾರಿಗೆ ನಿಗದಿಯಾದ ಕಾಲ ಹಾಗೂ ಹಣವೆಷ್ಟು?

ಇ) ಈ ಕಳಪೆ ಕಾಮಾಗಾರಿಯಿಂದಾಗಿ ರಾಜ್ಯದ ಬೊಕ್ಕಸಕ್ಕೆ ಆಗಿರುವ ನಷ್ಟವೆಷ್ಟು? ಹಾಗೂ ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ನಿಜವೇ?

ಈ) ಸದರಿ ಕಳಪೆ ಕಾಮಗಾರಿಗೆ ಜವಾಬ್ದಾರರಾದ ಅಧಿಕಾರಿಗಳ ವಿರುದ್ಧ ಕ್ರಮಕ್ಕೆಗೊಳ್ಳಲಿರುವ ಕ್ರಮವೆಷ್ಟು?